**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 451/2022**

| | | | |
|---|---|---|---|
| **ಹೆಸರು** | **:** | **ಹಣಮಂತ** | **ಚಾ.ಸಾ. 11** |
| **ತಂದೆಯ ಹೆಸರು** | **:** | **ಬಸಪ್ಪ** | **ಪ್ರಾ.ಸಾ. 3** |
| **ವಯಸ್ಸು** | **:** | **33 ವರ್ಷ** | **ದಿನಾಂಕಃ 02-07-2025** |
| **ಉದ್ಯೋಗ** | **:** | **PSI** | |
| **ವಾಸಸ್ಥಳ** | **:** | **ಯಾದಗಿರಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಖುದ್ದು ಸಾಕ್ಷಿಯಿಂದಃ**

ಅಕ್ಟೋಬರ 2021 ರಿಂದ ಜನವರಿ 2022 ರವರೆಗೆ ಚಿಂಚೋಳಿ ಪೋಲಿಸ ಠಾಣೆಯಲ್ಲಿ PSI ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 28-10-2021 ರಂದು ಚಾಸಾ-6 ಮತ್ತು 7 ರವರ ಹೇಳಿಕೆಗಳನ್ನು ಪಡೆದು ದಿನಾಂಕ 26-11-2021 ರಂದು ಮಾನ್ಯ ನ್ಯಾಯಾಲಯಕ್ಕೆ ತನಿಖೆ ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ VHR ವಕೀಲರಿಂದಃ**

ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ. ಆರೋಪಿತರ ಮನೆ ಇದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರು ಸಹ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಐನಾಪುರ ಗ್ರಾಮದಲ್ಲಿ ಪಡೆದಿದ್ದೇನೆ. ಐನಾಪುರ ಗ್ರಾಮಕ್ಕೆ ಹೋದಾಗ ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ. ಸುಳ್ಳು ಪ್ರಕರಣವಿದ್ದ ಕಾರಣ ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ.**